

# ಗಜಗಾತ್ರದ ಕೊಂಬು!



ಇದ್ರೆ ಹೀಂಗ್ ಇರಬೇಕು ನೋಡಪಾ ಕೊಂಬು..,

ಆಫ್ರಿಕದಲ್ಲಿನ ಗ್ಯಾಸ್ ವಿಲ್ಲೇದ ರಾಕೀ ರಿಡ್ಜ್ ಎಂಬ ಪ್ರದೇಶದಲ್ಲಿರುವ 'ಲರ್ಚ್' ಎನ್ನುವ ಹೋರಿ ತನ್ನ ಕೊಂಬುಗಳನ್ನು ಅತೀ ಹೆಚ್ಚು ಉದ್ದ ಬೆಳೆಸಿಕೊಂಡು ಗಿನ್ನಿಸ್ ದಾಖಲೆ ಮಾಡಿದೆ.

ಅಕ್ಟೋಬರ್ 11, 1995ರಲ್ಲಿ ಆಫ್ರಿಕಾದ ಮಿಸ್ಸೋರಿಯ ವಾಟ್ಸೀ (Watusi) ಎನ್ನುವಲ್ಲಿ ಜನಿಸಿದ ಲರ್ಚ್ ಎನ್ನುವ ಹೋರಿ ತನ್ನ 'ಕೋಡಿನ' ಮಹಿಮೆಗೆ ಎರಡು ಬಾರಿ ವಿಶ್ವ ದಾಖಲೆ ನಿರ್ಮಿಸಿದೆ.

ಲರ್ಚ್‌ಗೆ ಐದು ವಾರ ತುಂಬಿದಾಗ 'ಝುನಿಸಿ ವೂಲ್ಫ್' ಎನ್ನುವ ಮಹಿಳೆ ಅದನ್ನು ದತ್ತು ಪಡೆದಳು. ಮೊದಲು ಅದರ ಕೊಂಬುಗಳು ಸಾಮಾನ್ಯವಾಗಿದ್ದವು. ಆದರೆ ಅದರ ಮೂರನೇ ವಯಸ್ಸಿನಲ್ಲಿ ಬೃಹತ್ತಾಗಿ ಬೆಳೆಯಲು ಪ್ರಾರಂಭಿಸಿದವು. ಇದನ್ನು ಕಂಡ ಝುನಿಸಿ, ತನ್ನ ಮುದ್ದು ಲರ್ಚ್‌ನ ಕೊಂಬುಗಳು ಗಿನ್ನಿಸ್ ರೆಕಾರ್ಡ್ ಸೇರಲು ಅರ್ಹವಾಗಿರಬಹುದೆಂದು ಭಾವಿಸಿ ಗಿನ್ನಿಸ್ ಸಂಸ್ಥೆಗೆ ಅರ್ಜಿ ಗುಜರಾಯಿಸಿದಳು. 37.5 ಇಂಚುಗಳ ಸುತ್ತಳತೆ ಹೊಂದಿದ ಲರ್ಚ್‌ನ ಕೊಂಬುಗಳ ಉದ್ದ 7 ಅಡಿ 6 ಅಂಗುಲ. ಲರ್ಚ್ ಕೊಂಬಿಗಿಂತ ಇತರೆ ಯಾವುದೇ ಹೋರಿಯ ಕೊಂಬುಗಳು ಉದ್ದ ಇರದಿದ್ದ ಕಾರಣ ಲರ್ಚ್ 'ಗಿನ್ನಿಸ್ ರೆಕಾರ್ಡ್ಸ್ ಆಫ್ ಬುಕ್ಸ್'ಗೆ ಸೇರಿಕೊಂಡಿತು.

ಇತ್ತೀಚಿಗೆ ತನ್ನ ದಾಖಲೆಯನ್ನು ತಾನೆ ಮುರಿದ ಲರ್ಚ್‌ನ ಕೊಂಬುಗಳ ಸುತ್ತಳತೆ ಈಗ 38 ಇಂಚು ತಲುಪಿದೆ. ಲರ್ಚ್‌ನ ಕೊಂಬುಗಳು 10 ಅಡಿಗಳಷ್ಟು ಉದ್ದ ಬೆಳೆಯುವ ಸಾಧ್ಯತೆ ಇದೆ ಎಂದು ಹೋರಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ವಿಯೆಟ್ನಾಂ, ಕೀನ್ಯಾ, ಬ್ರಿಟನ್, ಆಸ್ಟ್ರೇಲಿಯಾ, ಜಪಾನ್, ಸ್ವೀಡನ್, ಕೆನಡಾ, ಜರ್ಮನಿ ಅಲ್ಲದೇ ಅಮೆರಿಕಾದ 50 ಕ್ಕೂ ಹೆಚ್ಚು ರಾಜ್ಯಗಳಿಂದ ಕುತೂಹಲಿಗಳು ಲರ್ಚ್‌ನ ಕೊಂಬುಗಳನ್ನು ನೋಡಲು ಆಗಮಿಸಿದ್ದಾರೆ. ಲರ್ಚ್ ಫೋಟೋ ಪೋಸ್ ಚೆನ್ನಾಗಿ ಕೊಡುತ್ತದೆ. ಅಲ್ಲದೇ ಜನರು ಅದರ ಸವಾರಿಯನ್ನು ಇಷ್ಟಪಡುತ್ತಿದ್ದಾರೆ ಎನ್ನುತ್ತಾಳೆ ಅದರ ಯಜಮಾನಿ ಝುನಿಸಿ.

– ವಸಂತ್ ಮಾಲವಿ.